ಶಿವಮೊಗ್ಗ ತಾಲ್ಲೂಕಿನ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ.

170(1903)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಗಾಜನೂರು ಹಾಗೂ ಭದ್ರಾವತಿ ತಾಲ್ಲೂಕು ಬಿ.ಆರ್.ಪಿ.ಯಲ್ಲಿರುವ ಡ್ಯಾಂಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಏಪರ ನೀಡುವುದು.

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ರಾಜ್ಯದ ಪ್ರವಾಸೋದ್ಯಮ ನೀತಿಯಲ್ಲಿ ಗಾಜನೂರು ಮತ್ತು ಬಿ.ಆರ್.ಪಿ. ಪ್ರದೇಶಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಡ್ಯಾಂಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸುವ ವಿಷಯವು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಆದಾಗ್ಯೂ, ಈ ಪ್ರದೇಶಗಳನ್ನು ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲು ಇಲಾಖೆಯು ಆಲೋಚಿಸುತ್ತಿದೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ರಾಜ್ಯದ ಪ್ರವಾಸೋದ್ಯಮ ಇಲಾಖೆಯಲ್ಲಿ ಎಲ್ಲಾ ಬ .ಆರ್.ಪಿ. ಪ್ರದೇಶ ಮತ್ತು ಇತರೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಹೇಳಿದ್ದಾರೆ. ಆದರೆ ಉತ್ತರದ ಮುಂದುವರೆದ ಭಾಗದಲ್ಲಿ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಯಲ್ಲಿ ಈ ಪ್ರದೇಶ ಬರುವುದಿಲ್ಲವೆಂದು ಹೇಳುತ್ತಾರೆ. ಏಕೆಂದರೆ ಭದ್ರಾ ಮತ್ತು ತುಂಗಾ ಪ್ರದೇಶಗಳು ಬಹಳ ಪವಿತ್ರವಾದ ಕ್ಷೇತ್ರಗಳು. ಇದರ ಜೊತೆಗೆ ಆ ಭಾಗದಲ್ಲಿ ಭದ್ರ ವನ್ಯಮೃಗಧಾಮ ಇದೆ. ಮತ್ತು ಲೇಕ್ ಯೂಸರ್ಸ್ ಕಮಿಟಿಯನ್ನು ಕುವೆಂಪು ಯೂನಿವರ್ಸಿಟಿ ಕೇಂದ್ರ ಬಿಂದುವನ್ನಾಗಿ ಮಾಡಬೇಕೆಂದು ಆಗಿನ ಭದ್ರಾ ಸಚಿವರಾಗಿದ್ದಂತಹ ಎ.ಆರ್.ಬದರಿನಾರಾಯಣ್‌ರವರು ಕೂಡ ಇದೇ ರೀತಿ ಹೇಳಿದ್ದರು. ಅಲ್ಲಿ ವಿಶ್ವಾತ್ಮೇಯ ಪೀಠ ಇದೆ. ಶೃಂಗೇರಿಯ ಪೀಠ ಕೂಡ ಇದೆ. ಆದಕಾರಣ ಆ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರವಾಸೋದ್ಯಮ ಇಲಾಖೆಯವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೇ, ಗಾಜನೂರು ಮತ್ತು ಬಿ.ಆರ್.ಪಿ.ಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಅಭಿವೃದ್ಧಿ

ಮಾಡಬೇಕಿನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಅಲ್ಲಿಯ ನೀರಾವರಿ ಇಲಾಖೆಯವರನ್ನು ಬೃಂದಾವನ ಗಾರ್ಡನ್ ಮತ್ತು ಮ್ಯೂಸಿಕಲ್ ಫೌಂಟೇನ್ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅಲ್ಲಿಗೆ ಮಾನ್ಯ ನೀರಾವರಿ ಇಲಾಖಾ ಸಚಿವರು ಭೇಟಿ ಕೊಟ್ಟು ಅಲ್ಲಿಗೆ ಒಬ್ಬ ಆರ್ಕಿಟೆಕ್ಟ್‌ನ್ನು ಅಪಾಯಿಂಟ್ ಮಾಡಿದ್ದಾರೆ. ಅವರಿಗೆ ಒಂದು ಡಿಸೈನ್ ಮಾಡಿ ಎಂದು ಹೇಳಿದ್ದಾರೆ. ಡಿಸೈನ್ ಬಂದ ಮೇಲೆ ಕೆಲಸ ಶುರು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಅಲ್ಲಿ ಶೂಟಿಂಗ್ ಸಹ ಮಾಡಬಹುದು.

ಶ್ರೀಮತಿ ರಾಣಿ.ರೋಷನ್ ಬೇಗ್: ಶೂಟಿಂಗ್ ವ್ಯವಸ್ಥೆ ಆದಷ್ಟು ಬೇಗ ಶುರು ಮಾಡುತ್ತೇವೆ.

ಬಿ.ಎಂ.ಶ್ರೀ ಯವರ ಭವನ ನಿರ್ಮಾಣ.

171(2268)

Sri LAKSHMINARAYANA M.D.(Turuvekere): Will the Hon'ble Minister of State for Kannada and Culture be pelased to state.

a) Reason for construction of B.M.Sri Bhavan in Sampige Villeage, Dandinashivara Hobli, Turuvekere taluk, Tumkur District;

b) What are the difficulties in starting construction through adequate money is available;

c) Whether the construction work will be started by giving instructions to the concerned officers?

Smt. RANI SATISH (Minister of State for Kannada and Culture):

a) Deputy Commissioner, Tumkur District being the Chairman of the committee regarding Construction of statues,